ಕನಸು ಮನಸ್ಸಿನಲ್ಲಿಯೂ ಕನ್ನಡ ಆವರಿಸಿತ್ತು. ಆದ ಕಾರಣ 1925ರಲ್ಲಿ 'ಕನಸಿನೊಳಗೊಂದು ಕಣಸು' ಎಂದು ಕನ್ನಡತಾಯಿ ಮತ್ತು ಮಕ್ಕಳ ಸಂವಾದದ ರೀತಿಯ ಕವನ ರಚಿಸಿದ್ದಾರೆ. ಆ ಕವನದ ಶೀರ್ಷಿಕೆಯ ಕೆಳಗೆ ಈಗಿನ ಕನ್ನಡನಾಡಿನ ಮತ್ತು ಕನ್ನಡಿಗರ ಸ್ಥಿತಿಯ ಚಿತ್ರ ಎಂದು ಆವರಣದಲ್ಲಿ ನಮೂದಿಸಿದ್ದಾರೆ. ಅದು ಕನ್ನಡಿಗರ ಮಾನಸಿಕ ಸಿದ್ಧತೆಯನ್ನು, ಕನ್ನಡದ ಮಕ್ಕಳು ಮಾಡಬೇಕಾದ ಯೋಗಸಾಧಕವಾದ ಕನ್ನಡದ ಸೇವೆಯನ್ನು ತಿಳಿಸುವ ಕವನವಾಗಿದೆ. ಹಿಂದಿನ ಕನ್ನಡನಾಡಿನ ವೈಭವವನ್ನು ನೆನೆದು ಅಂದಿನ ಸ್ಥಿತಿಯನ್ನು ಕುರಿತು ಬರೆದ ಕೆಚ್ಚಿನ ಕವನ ಅದಾಗಿದೆ. ಆ ಸಂವಾದವೇ ರೋಮಾಂಚನವನ್ನುಂಟು ಮಾಡುತ್ತದೆ.

'ಯಾರು ನಿಂದವರಲ್ಲಿ ತಾಯೆ' ಎಂಬೆ
'ಯಾರು ಕೇಳುವರೆನಗೆ, ಯಾಕೆ ತಂದೆ?'

***

'ನೀನಾರ ಮನೆಯವಳು ಮುತ್ತೈದೆ ಹೇಳು,'
'ನಾನಾರ ಮನೆಯವಳೊ ಬಯಲನ್ನೆ ಕೇಳು'

ಈ ನುಡಿಯಲ್ಲಿ ಅಂದು ಹಂಚಿ ಹರಿದುಹೋಗಿದ್ದ ಕರ್ನಾಟಕ ಮತ್ತು ಕನ್ನಡತಾಯಿಗೆ ತನ್ನದೇ ಆದ ಒಂದು ರಾಜ್ಯವಿಲ್ಲದ ಸ್ಥಿತಿಯನ್ನು ಧ್ವನಿಸುತ್ತ, ಅದಕ್ಕಾಗಿ ತನ್ನ ನೆಲದ ನಾಡಿಗನನ್ನು ಎಚ್ಚರಿಸುವ, ಅವನಲ್ಲಿ ತನ್ನ ನಾಡು–ನುಡಿಯ ಬಗ್ಗೆ ಅರಿವು ಮೂಡಿಸುವ ಭಾವ ವ್ಯಕ್ತವಾಗಿದೆ. ಅದನ್ನು ತಿಳಿಯಲು ಮಕ್ಕಳು ಯೋಗಶಾಲಿಗಳಾಗಿ ತ್ಯಾಗಶೀಲರಾಗಬೇಕು ಎಂದಿದೆ. ಆ ಮನಸ್ಸು ಮಕ್ಕಳಲ್ಲಿ ರೂಪುಗೊಂಡಾಗ ನಾಡು ಕಟ್ಟುವ ಕಾರ್ಯ ಯಶಸ್ವಿಯಾಗುತ್ತದೆ ಎಂಬ ಚಿಂತನೆಯಿದೆ. ಆ ಸಂವಾದ ಮುಂದುವರೆಯುತ್ತದೆ.

'ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ'
'ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ'


'ಇಲ್ಲೆನ್ನ ಲಾರೆ ನಾನಹುದೆನ್ನಲಮ್ಮೆ'
'ಬಲ್ಲವರು ದೈವವನು ಪರಿಕಿಸುವರೊಮ್ಮೆ'
'ಚಾಮುಂಡಿ ಪೇಳ್ ಬೇಕಾದುದೇನು?'
'ಗಂಡಸಾದರೆ ನಿನ್ನ ಬಲಿಕೊಡುವೆಯೇನು?'
(ಗರಿ)

### ನಾಡದೇವತೆ ಭುವನೇಶ್ವರಿ ಮೆರವಣಿಗೆ

ದಸರೆ ಹಬ್ಬದಲ್ಲಿ ನಾಡಿನ ಜನರು ಜಾತಿ ಮತಗಳಿಂದ ಮುಕ್ತರಾಗಿ ಪರಸ್ಪರ ಬನ್ನಿಯ ಎಸಳುಗಳನ್ನು ಕೊಡುತ್ತ 'ಬಂಗಾರವನ್ನು ತೆಗೆದುಕೊಂಡು ಬಂಗಾರದಂತೆ ಇರೋಣ' ಎಂದು ಹೇಳುತ್ತ ಸಂಭ್ರಮಿಸುವರು. ಅದು ಕನ್ನಡಿಗರನ್ನು ಒಂದುಗೂಡಿಸಿದ ನಾಡಹಬ್ಬ, ಅದು ಕನ್ನಡಿಗರ ಐಕ್ಯತೆಯ ಸಂಕೇತ ಎಂದು ಅರಿತ ಬೇಂದ್ರೆಯವರು 1925ರಲ್ಲಿ 'ನಾಡಹಬ್ಬ'ವನ್ನು ಹುಟ್ಟು ಹಾಕಿದರು. 'ಆ ಮೊದಲಲ್ಲೇ ವಿದ್ಯಾನಗರ ಕಟ್ಟಿದ ವಿದ್ಯಾರಣ್ಯ ಸ್ಮರಣೆಯನ್ನು ಗೆಳೆಯರು ಸ್ವಯಂಸ್ಫೂರ್ತಿಯಿಂದ ಮಾಡುತ್ತಿದ್ದೆವು.' (ಸಾ.ವಿ.ಸ್ವ. ಪುಟ 51) ಎಂದು ಅದರ ಹಿನ್ನೆಲೆಗೆ ಇದ್ದ ಮನೋಬಲವನ್ನು ತಿಳಿಸಿದ್ದಾರೆ. ಆ ಹಬ್ಬದಲ್ಲಿ ನಾಡದೇವತೆ ಭುವನೇಶ್ವರಿಯನ್ನು ಆರಾಧಿಸಿ ಮೆರವಣಿಗೆ ಮಾಡಿದರು. ಬೇಂದ್ರೆಯವರ ಪ್ರೇರಣೆಯಿಂದ 'ಹಲಸಂಗಿ ಗೆಳೆಯರ ಗುಂಪು'ವಿನ ಮಧುರಚೆನ್ನ ಮತ್ತು ಸಿಂಪಿ ಲಿಂಗಣ್ಣನವರು ಹಲಸಂಗಿಯಲ್ಲಿ ಪ್ರತಿ ವರ್ಷ ನಾಡಹಬ್ಬ ಆಚರಿಸಿದರು. ಒಂಬತ್ತು ದಿನಗಳು ಬೆಳಗಿನಲ್ಲಿ ನಗರ ಸಂಕೀರ್ತನೆ, ಭುವನೇಶ್ವರಿ ದೇವಿಯ ಮೆರವಣಿಗೆ ನಡೆಯುತ್ತಿತ್ತು.

### ಮೆಟ್ಟಿ-ಮುಟ್ಟಿ ನುಡಿದುದೆ ಕನ್ನಡ

ಬೇಂದ್ರೆಯವರು ಭಾರತಕ್ಕೆ ಸ್ವಾತಂತ್ರ್ಯ ಬಂದ ಮರು ವರ್ಷ ಮಹಾನವಮಿಯ ಬೆಳಗು 1948ರಲ್ಲಿ ಕನ್ನಡಿಗರನ್ನು ಪ್ರಶ್ನಿಸುವಂತೆ ಬರೆದಿರುವ ಕವನ 'ನೀವಾರಲಾ' ಧ್ವನ್ಯಾರ್ಥದಲ್ಲಿದೆ. ಅವರು ಕರ್ನಾಟಕವನ್ನು, ಕನ್ನಡವನ್ನು, ಕನ್ನಡಿಗರನ್ನು ಒಂದುಗೂಡಿಸಿ ಎಚ್ಚರಿಸುವ ರೀತಿಯಲ್ಲಿ ಹೀಗೆ ನುಡಿದಿದ್ದಾರೆ.



'ನಿವಾರಲಾ ನೀವಾರಲಾ ನಿವಾರಲಾ..!
ಯಾರೋ... ಯಾರೋ...'

ಈ ನುಡಿ ಆಶ್ಚರ್ಯಸೂಚಕವಾಗಿ ಸೂಚಿತವಾಗಿದ್ದರೂ ಮುಂದಿನ ಯಾರೋ... ಎಂಬ ಪ್ರಶ್ನಾರ್ಥಕ ನುಡಿ ಪ್ರಶ್ನಾರ್ಥಕ ಚಿಹ್ನೆ ಇಲ್ಲದೆ ಮುಂದುವರಿದಂತೆ ಸಾಗಿರುವುದು. ಬೇಂದ್ರೆಯವರು ಓದುಗರನ್ನು ತನ್ನ ಆಲೋಚನೆಯ ಸೆಳೆತಕ್ಕೆ ಎಳೆದು ತನ್ನ ವಿಚಾರದ ಕೇಂದ್ರಕ್ಕೆ ಕೊಂಡೊಯ್ಯುವ ಶೈಲಿಗೆ ಉತ್ತಮ ಉದಾಹರಣೆಯಾಗಿದೆ. ಹೀಗೆ ಕೇಳುತ್ತ ಅವರು ಯಾರೆಂಬುದನ್ನು ಸ್ಪಷ್ಟಗೊಳಿಸುತ್ತ ಸಾಗುತ್ತಾರೆ. ಅವರನ್ನು ತಾಯಿಯ ಸೇವೆಗೆ ಆಹ್ವಾನಿಸುತ್ತಾರೆ.

ತಾಯಿ–ಎದೆ ತುಂಬಿರುವದಣ್ಣಾ
ಬರಿದೆ ಮರುಗುವಿರೇತಕೆ?
ಬನ್ನಿ ತಾಯಿಯ ಜೀತಕೆ
ಮೆಟ್ಟಿ ನಡೆದುದೆ ಕನ್ನಡ
ಮುಟ್ಟಿ ನುಡಿದುದೆ ಕನ್ನಡ

ಮೆಟ್ಟಿ, ಮುಟ್ಟಿ, ತನ್ನದಾಗಿರುವ ಕನ್ನಡವನ್ನು ಅರಿತು ಕನ್ನಡಿಗರು ತಮ್ಮ ರಾಜ್ಯವನ್ನು ತಾವು ಕಟ್ಟಿಕೊಳ್ಳಬೇಕು. ಅದಕ್ಕೆ ಒಳ್ಳೆಯ ಅವಕಾಶ ಬಂದಿದೆ ಎಂದು ಹೇಳಿದ್ದಾರೆ. ಕನ್ನಡವು ಧಾರ್ಮಿಕ, ಸಾಹಿತ್ಯಿಕ, ರಾಜಕೀಯ, ಸಾಂಸ್ಕೃತಿಕವಾಗಿ ಸಂಪನ್ನವಾಗಿರುವುದನ್ನು ಸಾರುತ್ತ, ಅದು ಜನಸಾಮಾನ್ಯರ ಕನ್ನಡ ಎಂದು ಸಾರಿದ್ದಾರೆ.

ತಮಿಳರಣ್ಣಾ ತೆಲುಗ ತಮ್ಮ ಕೇರಳದ
ಕಿರಿಸೋದರ್
ಆರದಿರಲೈ ಆದರಾ.
ಮಹಾರಾಷ್ಟ್ರನಿರು ನೀನುತ್ತರಾ
ನೆರೆಹೊರಿಕೆಯಾಗಲಿ ಹತ್ತಿರಾ;
ಬೆಳೆಸೋಣ ಇಬ್ಬರ ಎತ್ತರಾ.

ಎಂದು ಕರ್ನಾಟಕದ ಗಡಿಯನ್ನು ಚಿತ್ರಿಸಿಕೊಟ್ಟು ಕರ್ನಾಟಕ ರಾಜ್ಯದ ಉದಯವನ್ನು ಕಲ್ಪಿಸಿಕೊಂಡಿದ್ದಾರೆ. ಹೀಗೆ ರೂಪುಗೊಳ್ಳುವ ರಾಜ್ಯದ ಕನ್ನಡಿಗರು ಅರ್ಥಪೂರ್ಣವಾಗಿ ಬಾಳಬೇಕು, ಆದರ್ಶವಂತರಾಗಿರಬೇಕು ಎಂದು ಆಶಿಸಿ ಹೇಳಿದ್ದಾರೆ:

ಮರ್ಯಾದೆ ಮೀರದೆ ನಡೆಯಿರಿ
ವಿಶ್ವ ತಾಳವ ಹಿಡಿಯಿರಿ (ಗಂಗಾವತರಣ)

### ಒಂದೇ ಕರ್ನಾಟಕ ಒಂದೇ

ಕರ್ನಾಟಕವನ್ನು ಕುರಿತು ಬೇಂದ್ರೆ ರಚಿಸಿದ ಹಾಡುಗಳಲ್ಲಿ ತುಂಬಾ ಜನಪ್ರಿಯವಾದದ್ದು 'ಒಂದೇ ಕರ್ನಾಟಕ' (1951). ಅದರ ಭಾವಸಂದರ್ಭ ಹೀಗಿದೆ: 'ಒಂದೇ ಕರ್ನಾಟಕ ಎಂಬ ಕವನ ಪರಿಹಾಸ ವಿನೋದ ಎಂಬಂತೆ ಬರೆದರೂ ಇಂದು ಅದು ಪರಮಾರ್ಥವಾಗಿ ನಿಂತಿದೆ.' ಕವಿ ಪರಿಹಾಸ, ವಿನೋದ ಮನದವನಾದರೂ ಚಿಂತನೆಯ ಔನ್ನತ್ಯದ ಶಿಖರದಲ್ಲಿ ನಿಂತಿರುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಕವಿ ಆಶಾಮನದವನಾಗಿ ನುಡಿದದ್ದು ಸಹೃದಯರಿಗೆ ದೀಪ್ತಿ ಚೇತನವಾಗಿದೆ.

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ!
||ಪಲ್ಲವಿ||
ಇಂದೇ ಮುಂದೆ ಎಂದೇ ಕರ್ನಾಟಕ ಒಂದೇ
ಜಗದೇಳಿಗೆ ಯಾಗುವುದಿದೆ ಕರ್ನಾಟಕದಿಂದೇ ||
ಇಲ್ಲಿಯ ಜನ–ಮನಭಾಷೆಯು ಕನ್ನಡವದು
ಒಂದೇ
ಒಂದೇ ಜನವೂ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಳವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ;
ಇರದಿದ್ದರು ಒಂದೇ!
ಕನ್ನಡವೆಂದೂ ಒಪ್ಪದು ಕರ್ನಾಟಕನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ||
(ಗಂಗಾವತರಣ)